SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UNIVERSITY LIBRARY & LEARNING RESOURCE CENTRE

Online Newspaper Clipping Service
ವಿಜಯವಾಣಿ
Dtd- Wednesday, 4th, September- 2019



## ₹10 ಲಕ್ಷದವರೆಗೆ ದಂಡ ವಿಧಿಸಲು ಅವಕಾಶ ಕರಡು ಮಸೂದೆಯಲ್ಲಿ ಪ್ರಸ್ತಾಪ


# ವೈದ್ಯರ ಮೇಲೆ ಹಲ್ಲೆಗೆ 10 ವರ್ಷ ಜೈಲು!

**ನವದೆಹಲಿ:** ವೈದ್ಯರ ಮೇಲಿನ ಹಲ್ಲೆ ಪ್ರಕರಣ ತಡೆಯಲು ಹೊಸ ಕಾನೂನು ರಚಿಸಲು ಮುಂದಾಗಿರುವ ಕೇಂದ್ರ ಸರ್ಕಾರ, ಇಂಥ ಅಪರಾಧ ನಡೆಸಿದವರಿಗೆ 10 ವರ್ಷ ಜೈಲು ಶಿಕ್ಷೆ ಮತ್ತು ₹ 10 ಲಕ್ಷ ದಂಡ ವಿಧಿಸುವ ಅಂಶವನ್ನು ಕರಡು ಮಸೂದೆಯಲ್ಲಿ ಉಲ್ಲೇಖಿಸಿದೆ. ಕೇಂದ್ರ ಆರೋಗ್ಯ ಸಚಿವಾಲಯ 'ಸೇವಾನಿರತರು ಮತ್ತು ಕ್ಲಿನಿಕಲ್ ಎಸ್ಟಾಬ್ಲಿಷ್‌ಮೆಂಟ್ (ಹಿಂಸಾಚಾರ ಮತ್ತು ಹಾನಿ ತಡೆ) ಕರಡು ಮಸೂದೆ ಪ್ರಸ್ತಾಪಿಸಿದ್ದು, ಈ ಬಗ್ಗೆ ಸಾರ್ವಜನಿಕರಿಂದ ಅಭಿಪ್ರಾಯಕೋರಿದೆ.

ದೇಶಾದ್ಯಂತ ವೈದ್ಯರ ಮೇಲೆ ಹಲ್ಲೆ ನಡೆಯುತ್ತಿರುವ ಬಗ್ಗೆ ವರದಿಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಇಂಥ ಘಟನೆಗಳಿಗೆ ಕಡಿವಾಣ ಹಾಕುವ ದೃಷ್ಟಿಯಿಂದ ಕರಡು ಮಸೂದೆ ರೂಪಿಸಲಾಗಿದೆ. ಮಸೂದೆ ಅಂತಿಮವಾಗುವುದಕ್ಕೂ ಮೊದಲು ಸಾರ್ವಜನಿಕರ ಅಭಿಪ್ರಾಯ ಪಡೆಯಲಾಗುವುದು. ಆಕ್ಷೇಪ ಅಥವಾ ಸಲಹೆಗಳು 30 ದಿನದೊಳಗೆ ಸಲ್ಲಿಸಬೇಕು ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ. ವೈದ್ಯರು ಮತ್ತು ಆರೋಗ್ಯ ಸೇವಾ ಸಿಬ್ಬಂದಿ ಮೇಲಿನ ಹಲ್ಲೆ ಪ್ರಕರಣಗಳ ಹಿನ್ನೆಲೆಯಲ್ಲಿ ದೇಶವ್ಯಾಪಿ ಪ್ರತಿಭಟನೆ ನಡೆದು, ಕಠಿಣ ಕಾನೂನು ರಚನೆಗೆ ಒತ್ತಾಯ ಕೇಳಿಬಂದಿತ್ತು. ಪಶ್ಚಿಮ ಬಂಗಾಳದ ವೈದ್ಯರ ಮುಷ್ಕರ ರಾಷ್ಟ್ರವ್ಯಾಪಿ ಹಬ್ಬಿದ್ದ ಮತ್ತು ಇತ್ತೀಚೆಗೆ ಅಸ್ಸಾಂನಲ್ಲಿ 73 ವರ್ಷದ ಡಾ.ದೇವನ್ ದತ್ತ, ಗುಂಪು ದಾಳಿಯಿಂದ ಸಾವನ್ನಪ್ಪಿರುವ ಹಿನ್ನೆಲೆಯಲ್ಲಿ ವೈದ್ಯರ ಸುರಕ್ಷತೆ ಬಗ್ಗೆ ಕಠಿಣ ಕಾನೂನು ರಚಿಸಲು ಕರಡು ಮಸೂದೆ ರೂಪಿಸಲಾಗಿದೆ ಎಂದು ಸಚಿವಾಲಯ ಹೇಳಿದೆ.

» ಸಾರ್ವಜನಿಕರ ಅಭಿಪ್ರಾಯ ಕೋರಿರುವ ಆರೋಗ್ಯ ಸಚಿವಾಲಯ

ಸಾಂದರ್ಭಿಕ ಚಿತ್ರ




### ತಿದ್ದುಪಡಿ ಏನು?

ಆರೋಗ್ಯ ಸೇವಾ ಸಿಬ್ಬಂದಿ ಕರ್ತವ್ಯ ವೇಳೆ ಹಲ್ಲೆಯಿಂದ ತೀವ್ರ ಗಾಯಗೊಂಡರೆ ಅದನ್ನು ಭಾರತೀಯ ದಂಡ ಸಂಹಿತೆ (ಐಪಿಸಿ) 230ನೇ ಸೆಕ್ಷನ್ ಅಡಿಯಲ್ಲಿ ಮೂರು ವರ್ಷದವರೆಗೆ ಶಿಕ್ಷೆ ಇದೆ. ಇದನ್ನು 10 ವರ್ಷಕ್ಕೆ ವಿಸ್ತರಿಸುವ ಪ್ರಸ್ತಾಪ ಕರಡು ಮಸೂದೆಯಲ್ಲಿ ಮಾಡಲಾಗಿದೆ. ಇದೇ ರೀತಿ ₹ 2 ಲಕ್ಷವಿದ್ದ ದಂಡ ಮೊತ್ತವನ್ನು ₹ 10 ಲಕ್ಷಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ.